# ‘ಮನೆಯಾಟ’ದ ಪಾಠ



**ಮಕ್ಕಳೊಡನೆ ‘ಮನೆಯಾಟ’ ಆಡುವುದು ‘ಕ್ವಾಲಿಟಿ ಟೈಮ್’ ಆಗಬಹುದು. ಮಗುವನ್ನು ಮೊಬೈಲ್ ದಾಸನನ್ನಾಗಿ ಮಾಡಿ ಕಳೆಯುವ ಸಮಯವನ್ನು ‘ಕ್ವಾಲಿಟಿ ಟೈಮ್’ ಎನ್ನಲಾಗದು.**

■ ಸ್ವಯಂಪ್ರಭಾ

ದುಡಿಮೆಯೇ ದೇವರು ಎಂದುಕೊಂಡಿರುವ ಕುಟುಂಬಗಳಲ್ಲಿ ಮಗುವನ್ನು ಸಾಕಿ ಸಲಹುವುದು ಸುಲಭದ ಮಾತಲ್ಲ. ಗಡಿಬಿಡಿಯ ಓಡಾಟ, ಹಲವಾರು ಜಂಜಾಟಗಳ ನಡುವೆಯೇ ಮಗುವಿನ ಜೊತೆಗೆ ಸೂಕ್ಷ್ಮವಾಗಿ, ನಯವಾಗಿ ವ್ಯವಹರಿಸಬೇಕಾಗುತ್ತದೆ. ಗಂಡ–ಹೆಂಡತಿ ಇಬ್ಬರೂ ದುಡಿಯುವವರೇ ಆದರೆ, ಪುಟ್ಟ ಮಗುವನ್ನು ನೋಡಿಕೊಳ್ಳಲು ಮನೆಯಲ್ಲಿ ಹಿರಿಯರು ಅಥವಾ ಓರಗೆಯವರು ಇದ್ದರೆ, ಕೆಲಸಗಳು ಸುರಳೀತ ಆಗಬಹುದೇನೋ. ಆದರೂ ಮಗುವಿನೊಂದಿಗೆ ಸಾಕಷ್ಟು ಗುಣಾತ್ಮಕ ಸಮಯ ಕಳೆಯಲಿಲ್ಲ ಎಂಬ ಕೊರಗು ಪೋಷಕರಿಗೆ ಇದ್ದೇ ಇರುತ್ತದೆ. ಅಮ್ಮಂದಿರ ಮನಸ್ಸಿನಲ್ಲಿ ಈ ಒಂದು ತಪ್ಪಿತಸ್ಥ ಭಾವನೆ ಇನ್ನೂ ಹೆಚ್ಚಾಗಿರುತ್ತದೆ.

ಮಗುವಿನೊಡನೆ ‘ಕ್ವಾಲಿಟಿ ಸಮಯ’ ಕಳೆಯಬೇಕು ಎಂದು ಎಲ್ಲರೂ ಕಿವಿಮಾತು ಹೇಳುವುದನ್ನು ಪಾಲಕರು ಮತ್ತು ಪೋಷಕರು ಕೇಳುತ್ತಲೇ ಇರುತ್ತಾರೆ. ಆದರೆ ನಿಜವಾಗಿಯೂ ಕ್ವಾಲಿಟಿ ಸಮಯ ಅಥವಾ ಗುಣಾತ್ಮಕವಾದ ಸಮಯವೆಂದರೇನು? ಮಗುವಿನೊಡನೆ ಕಳೆಯುವ ಗುಣರಹಿತ ಸಮಯ ಎಂಬುದೊಂದು ಇದೆಯೇ ಎಂದು ಪ್ರಶ್ನೆ ಮೂಡಬಹುದು. ಆದರೆ ಸಮಯದ ಅಪವ್ಯಯ ಹೇಗಾಗುತ್ತದೆ ಎಂಬುದನ್ನು ನಾವು ಗುರುತಿಸುವುದು ಮುಖ್ಯ.

ಮಗುವನ್ನು ಆಟವಾಡಿಸುವ ಪೋಷಕರು ಒಂದಲ್ಲ ಒಂದು ಗ್ಯಾಜೆಟ್‌ನ ಜೊತೆಗೇ ಮಗುವನ್ನು ಆಟವಾಡಲು ಹೇಳುವುದು ಸಾಮಾನ್ಯ. ಇದಕ್ಕೆ ಒಂದು ಉತ್ತಮ ಉದಾಹರಣೆ, ಮಗುವಿಗೆ ಊಟ ಮಾಡಿಸುವ ಸಂದರ್ಭ. ಹೆಚ್ಚಿನ ಮಕ್ಕಳಿಗೆ ಊಟ ಮಾಡುವಾಗ ಮೊಬೈಲ್ ಅಥವಾ ಟೀವಿಯ ಹಾಡುಗಳು, ವಿಡಿಯೊಗಳು ಇರಲೇಬೇಕು ಎಂಬ ನಂಬಿಕೆ ಇಂದು ಬೆಳೆದುಬಿಟ್ಟಿದೆ.

ಸಭೆ ಸಮಾರಂಭಗಳಲ್ಲಿ ಗಮನಿಸಿ ನೋಡಿ – ಎಡಗೈಯಲ್ಲಿ ಮಗುವನ್ನು ಎತ್ತಿಕೊಂಡು, ಅಂಗೈಯಲ್ಲಿ ಮೊಬೈಲ್ ತೋರಿಸುತ್ತ, ಬಲಗೈಯಲ್ಲಿ ಮಗುವಿಗೆ ಉಣಿಸುವ ಪಾಲಕರು ಕಾಣಿಸುತ್ತಾರೆ. ಮಗುವಿನ ಗಮನವೆಲ್ಲ ಮೊಬೈಲ್‌ನಲ್ಲಿ ಮುಳುಗಿರುವಾಗ ಪೋಷಕರಿಗೆ ಉಣಿಸುವುದು ಸುಲಭವಾಗುತ್ತದೆ.

ತೋಟಕ್ಕೋ, ಪಕ್ಕದ ಮನೆಯ ಜಗಲಿಯ ಮೇಲೆಯೋ, ಛಾವಣಿಯಲ್ಲಿ ಹಾರುವ ಹಕ್ಕಿಗಳನ್ನು ತೋರಿಸುತ್ತಲೋ, ರಸ್ತೆಯ ವಾಹನಗಳನ್ನು ಲೆಕ್ಕ ಹಾಕುತ್ತಲೋ, ಟೆರೇಸ್‌ನಲ್ಲಿಯೋ ಮಕ್ಕಳಿಗೆ ಪೋಷಕರು ಉಣಿಸುವ ದೃಶ್ಯವನ್ನು ಕಾಣುವುದು ಇಂದು ಅಪರೂಪವಾಗಿಬಿಟ್ಟಿದೆ! ಹಿಂದಿನ ಕಾಲದಲ್ಲಿ ಮಗು, ಹಕ್ಕಿ, ಚಂದ್ರ, ನಕ್ಷತ್ರದ ಕತೆ ಕೇಳುತ್ತ ತುತ್ತು ತಿನ್ನುತ್ತಿತ್ತು. ಕೋಳಿಗಳ ಕೂಗು, ಬೆಕ್ಕಿನ ಮ್ಯಾಂವ್‌ಗಳನ್ನು ಆಲಿಸುತ್ತಾ ತುತ್ತು ಉಣ್ಣುತ್ತಿತ್ತು. ಇಂದು ಪರಿಸ್ಥಿತಿ ಬದಲಾಗಿದೆ. ಮೊಬೈಲ್ ಎಂದರೆ ಮಕ್ಕಳಿಗೆ ಎಷ್ಟು ಇಷ್ಟ ಎಂಬುದನ್ನು ಪೋಷಕರೇ ಒತ್ತಿಹೇಳುತ್ತಿದ್ದಾರೆ. ಯಾಕೆಂದರೆ ಪೋಷಕರಿಗೂ ಮೊಬೈಲ್ ಇಷ್ಟವಾಗಿಬಿಟ್ಟಿದೆ.

ಆದರೆ ಶಹನಾಜ್ ಹಾಗಲ್ಲ. ಮಗುವಿಗಾಗಿ ಆಕೆ ಕೆಲವು ವರ್ಷಗಳಿಂದ ಸ್ಮಾರ್ಟ್‌ಫೋನ್ ಬಳಕೆಯನ್ನೇ ಬಿಟ್ಟುಬಿಟ್ಟಿದ್ದಳು. ಮಗುವಿಗೆ ಐದು ವರ್ಷವಾಗುತ್ತಲೇ ಅವಳು ಹೊಸ ಫೋನ್ ಖರೀದಿಸಿದಳು. ಫೋನ್ ಅನ್ನು ರಟ್ಟಿನ ಪೆಟ್ಟಿಗೆಯಿಂದ ಅಮ್ಮ–ಮಗಳು ಇಬ್ಬರೂ ಸೇರಿ ಹೊರತೆಗೆದರು. ಅದರ ನಿರ್ವಹಣೆಯನ್ನೆಲ್ಲ ನೋಡಿದ ಬಳಿಕ ಒಂದು ನಿಯಮ ಹೇಳಿದಳು:

‘ನಮ್ಮ ನಮ್ಮ ಕೆಲಸ ಮುಗಿದ ಕೂಡಲೇ ನಾವು ಮನೆಗೆ ಹೋಗುತ್ತೇವಲ್ಲ? ಶಾಲೆಯ ಆಟ ಪಾಠ ಮುಗಿದ ಕೂಡಲೇ ಮಕ್ಕಳು ಮನೆಗೆ ಹೋಗುತ್ತಾರಲ್ಲಾ... ಅದೇ ರೀತಿ ಫೋನ್‌ನಲ್ಲಿ ನಮ್ಮ ಕೆಲಸ ಮುಗಿದ ಬಳಿಕ ನಾವು ಫೋನ್ ಅನ್ನೂ ಅದರ ಮನೆಗೆ ಕಳುಹಿಸಬೇಕು’ ಎಂದು ಹೇಳಿ, ಫೋನ್‌ಗಾಗಿ ರಟ್ಟಿನ ಪೆಟ್ಟಿಗೆ ಬಳಸಿ ಮೇಜಿನ ಮೇಲೊಂದು ಸುಂದರ ಮನೆಯನ್ನು ರೂಪಿಸಿದಳು. ಹೀಗೆ ಪ್ರತಿಯೊಂದು ವಸ್ತುವಿನ ಬಳಕೆಗೂ ಒಂದು ನಿರ್ದಿಷ್ಟ ಶಿಸ್ತನ್ನು ರೂಢಿಸಿಕೊಂಡರೆ ಅದರ ಅತಿ ಬಳಕೆಯನ್ನು ತಡೆಯಬಹುದು.

ಇದು ಕೇವಲ ಫೋನ್‌ಗೆ ಮಾತ್ರ ಸಂಬಂಧಿಸಿದ್ದಲ್ಲ. ‘ಕಸದ ಮನೆ – ಕಸದ ಬುಟ್ಟಿ’, ಪಾನೀಯ ಕುಡಿದ ಬಳಿಕ ಲೋಟದ ಮನೆ – ಅಡುಗೆ ಮನೆ ಸಿಂಕ್, ಅದೇ ಲೋಟವನ್ನು ತೊಳೆದ ಬಳಿಕ – ಅದರ ಮನೆ ಪಾತ್ರೆ ಸ್ಟ್ಯಾಂಡ್, ಧರಿಸಿದ ಬಟ್ಟೆ ತೆಗೆದರೆ ಅದರ ಮನೆ ಬಚ್ಚಲು ಮನೆಯ ಬಕೆಟ್, ತೊಳೆದು ಒಣಗಿಸಿದ ಬಟ್ಟೆಗಳು, ಟವೆಲ್‌ಗಳ ಮನೆಯೇನಿದ್ದರೂ ಅದು ಕಪಾಟು... ಹೀಗೆ ಪ್ರತಿಯೊಂದು ವಸ್ತುವೂ ಆಯಾ ಜಾಗದಲ್ಲಿಯೇ ಇರಬೇಕು ಎಂಬುದನ್ನು ಕಲಿಸುವುದಕ್ಕೆ ಈ ‘ಮನೆಯಾಟ’ ಬಹಳ ಸೂಕ್ತವಾದುದು.

ಮಕ್ಕಳೊಡನೆ ಮನೆಯಾಟವಾಡುತ್ತಲೇ ಅದುವೇ ಒಂದು ಕ್ವಾಲಿಟಿ ಟೈಮ್ ಆಗಬಹುದು. ಹೀಗೆ ಮಗುವಿನೊಡನೆ ವ್ಯವಹರಿಸುವಾಗ ಪ್ರತ್ಯಕ್ಷವಾಗಿ ಮಗುವಿಗೆ ಒಳ್ಳೆಯ ಪಾಠಗಳನ್ನು ಕಲಿಸಿದಂತಾಗುತ್ತದೆ. ಅದೇ ರೀತಿ, ಮಗುವಿನ ದೆಸೆಯಿಂದ ಪರೋಕ್ಷವಾಗಿ ನಾವೂ ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಂಡಂತಾಗುತ್ತದೆ. ಒಟ್ಟಿನಲ್ಲಿ ಮಗುವಿನೊಡನೆ ಕಳೆಯುವ ಸಮಯವೆಂದರೆ ಅದು ಸದುಪಯೋಗವಾಗುವುದು ಮುಖ್ಯ. ಮಗುವನ್ನು ಮೊಬೈಲ್ ದಾಸನನ್ನಾಗಿಸುತ್ತ ಕಳೆಯುವ ಸಮಯವನ್ನು ಕ್ವಾಲಿಟಿ ಟೈಮ್ ಎಂದು ಹೇಳುವುದು ಸಾಧ್ಯವಿಲ್ಲ.

ಪ್ರತಿಕ್ರಿಯಿಸಿ: feedback@sudha.co.in